# ಸಾಧ್ಯತೆಗಳ ಸಾಗರದಲ್ಲಿ ಆಯ್ಕೆಯೆಂಬ ಮುತ್ತು



**ಮಕ್ಕಳ ಎದುರು ಆಯ್ಕೆಗಳ ಮಹಾಪೂರವೇ ಇರುತ್ತದೆ. ಆಯ್ಕೆಗಳನ್ನು ಮುಂದಿಟ್ಟರೆ ಸಾಲದು, ಆಯ್ದುಕೊಳ್ಳುವ ಕಲೆಯನ್ನೂ ಅವರಿಗೆ ಕಲಿಸಬೇಕು.**

■ ಸ್ವಯಂಪ್ರಭಾ

ಆಯ್ಕೆಗಳು ಹೆಚ್ಚಿದ್ದರೆ ಒಳ್ಳೆಯದೋ ಅಥವ ಕಡಿಮೆ ಇದ್ದರೆ ಉತ್ತಮವೋ? ವಿಪರೀತ ಆಯ್ಕೆಗಳಿರುವಾಗ ಅವುಗಳಲ್ಲಿ ಮೊದಲ ಹಂತದ ಆಯ್ಕೆಗಳನ್ನು (shortlist) ಮಾಡಿಕೊಡುವ ಜವಾಬ್ದಾರಿ ಯಾರಾದರೂ ವಹಿಸಿಕೊಂಡರೆ ಒಳ್ಳೆಯದಲ್ಲವೇ? ಬಗೆಹರಿಯದ ಈ ಜಿಜ್ಞಾಸೆಯನ್ನು ಮಕ್ಕಳ ವಿಚಾರಕ್ಕೆ ಸಂಬಂಧಿಸಿದಂತೆ ವಿಷಯ ವಿಸ್ತಾರವನ್ನು ಸೀಮಿತವಾಗಿಸಿಕೊಂಡು ಚರ್ಚಿಸೋಣ.

ಮೊನ್ನೆ ಒಂದು ಮದುವೆಗೆ ಹೋಗಿದ್ದೆ. ಅಲ್ಲಿ ಬಫೆ ಊಟ ಮತ್ತು ಪಂಕ್ತಿಯಲ್ಲಿ ಕುಳಿತು ಮಾಡುವ ಊಟದ ವಿಭಾಗಗಳಿದ್ದವು. ನನ್ನ ಸ್ನೇಹಿತೆ ಪ್ರಿಯಾ ಮತ್ತು ಅವಳ ಮಗ ನಿಶಾನ್ ನಡುವೆ ಈ ಬಗ್ಗೆ ಭಾರಿ ಚರ್ಚೆ–ಜಗಳ ನಡೆಯುತ್ತಿತ್ತು. ನಿಶಾನ್‌ಗೆ ಬಫೆ ಊಟ ಮಾಡಿ ಬೇಗನೇ ಆಟವಾಡಲು ಹೋಗುವ ತವಕ. ಪ್ರಿಯಾಳ ಪ್ರಕಾರ ಪಂಕ್ತಿ ಊಟವೇ ಉತ್ತಮ. ಬಫೆ ಕೌಂಟರ್‌ಗಳಲ್ಲಿ ಏನೆಲ್ಲ ಅಡುಗೆ ಇದೆ ಎನ್ನುವುದೇ ಗೊತ್ತಾಗುವುದಿಲ್ಲ. ಒಂದಿಷ್ಟು ಹಾಕ್ಕೊಂಡು ಉಂಡ ಕೂಡಲೇ ಹಸಿವು ಇಂಗುತ್ತದೆ. ಅಂದಮೇಲೆ ಮದುವೆ ಊಟ ಅಂತ ಅನ್ನಿಸುವುದಾದರೂ ಹೇಗೆ? ಮದುವೆಯ ಸಂಭ್ರಮದಲ್ಲಿ ಊಟಕ್ಕೇ ಹೆಚ್ಚಿನ ಮಹತ್ವ ಅಲ್ಲವೇ.

ಆಯ್ಕೆಗಳಿಗೆ ಸಂಬಂಧಿಸಿದ ವಿಚಾರವನ್ನು ಪ್ರಿಯಾ ನನ್ನೊಂದಿಗಿನ ಮಾತಿನಲ್ಲಿ ಇನ್ನಷ್ಟು ವಿಸ್ತರಿಸಿ ಹೇಳಿದಳು.

ವಿಕಾಸ ಹೊಂದುವ ಮನಸ್ಸು ಯಾವಾಗಲೂ ಸಂಭವನೀಯತೆಗಳಿಗೆ ಮುಕ್ತವಾಗಿ ತೆರೆದುಕೊಂಡಿರಬೇಕು; ಊಟದ ಪಂಕ್ತಿಯಲ್ಲಿ ಒಂದಾದ ಮೇಲೊಂದರಂತೆ ಅಡುಗೆ ಬಡಿಸುತ್ತಾರಲ್ಲ ಹಾಗೆ. ಮುಂದಿನ ಐಟಂ ಯಾವುದು ಎಂದು ಗೊತ್ತಿರುವುದಿಲ್ಲ. ಅದನ್ನು ತಿನ್ನಬೇಕೆಂದೂ ಅನಿಸುವುದಿಲ್ಲ ಎಂದುಕೊಳ್ಳೋಣ. ಆದರೆ ಊಟದ ಕ್ರಮವು ಎಲ್ಲ ಅಡುಗೆಯನ್ನೂ ಪರಿಚಯಿಸುತ್ತದೆ. ಅದು ಮಕ್ಕಳಲ್ಲಿ, ದೊಡ್ಡವರಲ್ಲಿಯೂ ವ್ಯವಧಾನ ಹೆಚ್ಚಿಸಬಹುದು.

ಎರಡನೆಯದು, ಅವಳ ವೈಯಕ್ತಿಕ ನಿಲುವಿಗೆ ಸಂಬಂಧಿಸಿದ್ದಾದರೂ ಬಹಳ ಗಮ್ಮತ್ತಾಗಿದೆ. ‘ನೋಡು, ನಾಳೆ ಪಿಂಕ್ ಸೀರೆ ಉಟ್ಟು ಬಾ’ ಎಂದು ಪ್ರಿಯಕರ ತನ್ನ ಪ್ರೇಯಸಿಗೆ ಹೇಳಿದರೆ, ಅವನು ನಾಳಿನ ಸುಂದರ ಸಾಧ್ಯತೆಯನ್ನು ಸೀಮಿತ ಮಾಡುತ್ತಿದ್ದಾನೆ ಎಂದೇ ಅರ್ಥ. ಅವಳೋ, ತಿಳಿನೀಲಿ ಮ್ಯಾಕ್ಸಿ ಧರಿಸಿ ಸುಂದರವಾಗಿ ಅಲಂಕರಿಸಿಕೊಂಡು ಅವನಿಗೆ ಸರ್‌ಪ್ರೈಸ್ ಮಾಡುವ ಉದ್ದೇಶ ಹೊಂದಿರಬಹುದೇನೋ ಅಲ್ಲವೇ’. ಪ್ರಿಯಾ ಮಾತು ಮುಗಿಸಿ ನಕ್ಕಳು.

ಮಕ್ಕಳು ಜಗತ್ತಿನ ವಿಚಾರಗಳನ್ನು ಬಿಡುಗಣ್ಣಿನಿಂದ ನೋಡಬೇಕು ಎಂಬ ಆಶಯ ಅಪ್ಪ ಅಮ್ಮನಲ್ಲಿ ಇದ್ದಾಗ ನಿಜಕ್ಕೂ ಅವರು ಮಕ್ಕಳಿಗೆ ಸ್ನೇಹಿತರಾಗಿಬಿಡುತ್ತಾರೆ.

ಪ್ರಿಯಾ ತನ್ನ ಬಾಲ್ಯ ನೆನಪಿಸಿಕೊಂಡಳು: “ರೈಲನ್ನೇ ನೋಡದ ನಾನು ಅಮ್ಮನ ಬಳಿ ಒಮ್ಮೆ ಕೇಳಿದೆ, ‘ರೈಲು ನೋಡಲು ಹೇಗಿರುತ್ತದೆ?’ ನನ್ನ ಅಮ್ಮ ಸ್ವಲ್ಪ ವಿವರಿಸಿ ಸುಮ್ಮನಾದರು. ಆದರೆ ಮರುದಿನ ಬೆಳಿಗ್ಗೆ ನಾವು ಎರಡು ತಾಸು ಪ್ರಯಾಣ ಮಾಡಿ ರೈಲು ನಿಲ್ದಾಣವನ್ನು ತಲುಪಿದೆವು. ರೈಲು ಹಳಿ ಮೇಲೆ ಬಂದು ನಿಲ್ಲುವುದನ್ನು ಬೆರಗುಗಣ್ಣಿಂದ ನೋಡಿದೆ. ಅಮ್ಮ ಹೆಚ್ಚೇನೂ ವಿವರಿಸಲಿಲ್ಲ. ನಾವು ಮತ್ತೆ ಬಸ್ಸು ಹತ್ತಿ ವಾಪಸ್ ಬಂದೆವು” ಎಂದಳು.

ಜಗತ್ತಿನ ಎಲ್ಲ ವಿಚಾರಗಳನ್ನು, ವಿಸ್ಮಯಗಳನ್ನೂ ಮಕ್ಕಳು ನೋಡಬೇಕು, ಅರಿಯಬೇಕು ಎಂಬ ಆಶಯ ಅಂತರಂಗದಲ್ಲಿ ಇರಬೇಕು. ಹಾಗಾದಾಗ ಮಾತ್ರ ಅವರಲ್ಲಿ ಆಯ್ಕೆಯ ಸಾಮರ್ಥ್ಯ ಬೆಳೆಯುವುದು ಸಾಧ್ಯವಾಗುತ್ತದೆ. ಗೋಡಂಬಿಯ ಸವಿಯನ್ನೂ ನೆಲಗಡಲೆಯ ರುಚಿಯನ್ನೂ ಸವಿದಾಗ, ಎರಡರ ಮಹತ್ವ ಅವರಿಗೆ ಅರಿವಾಗುವುದಲ್ಲವೇ?

ಈಗಂತೂ ಮಕ್ಕಳು ಮುಂದಕ್ಕೇನು ಓದಬೇಕು ಎಂಬುದನ್ನು ಬಹಳ ಬೇಗನೇ ನಿರ್ಧರಿಸಿಬಿಡುತ್ತಾರೆ. ಎಲ್ಲ ನಿರ್ಧಾರಗಳೂ ಗಳಿಕೆಯ ಸಾಧ್ಯತೆ ಎಷ್ಟಿರಬಹುದು ಎಂಬ ಪ್ರಶ್ನೆಯ ಆಧಾರದಲ್ಲಿಯೇ ನಡೆಯುತ್ತದೆ. ಆದರೆ ಮಕ್ಕಳ ಮುಂದೆ ಲಭ್ಯ ಇರುವ ಅವಕಾಶಗಳು ಮತ್ತು ಸಾಧ್ಯತೆಗಳನ್ನು ತೆರೆದಿಡುವ ಜವಾಬ್ದಾರಿಯನ್ನು ಪೋಷಕರು ನಿಭಾಯಿಸಬೇಕು. ‘ಇಂತಹುದೆಲ್ಲ ಕಲಿಕೆಯ ಸಾಧ್ಯತೆಗಳಿವೆ’ ಎಂಬ ಕೋರ್ಸ್‌ಗಳ ವಿವರವಷ್ಟೇ ಅಲ್ಲ, ಬದುಕಿನಲ್ಲಿ ಇಂತಹುದೆಲ್ಲ ಸಾಧನೆಗಳನ್ನು ಮಾಡಿದವರಿದ್ದಾರೆ ಎಂಬುದನ್ನೂ ಅವರ ಮುಂದೆ ತೆರೆದಿಡುವುದು ಒಳ್ಳೆಯದು.

ಎಷ್ಟೇ ಮಾಹಿತಿ, ಅವಕಾಶ, ವಿವರಗಳನ್ನು ನೀಡಿದರೂ ಮಕ್ಕಳು ಮತ್ತೆ ಎಡವಬಹುದು. ಆಯ್ದುಕೊಂಡ ದಾರಿ ಖುಷಿ ಕೊಡುತ್ತಿಲ್ಲ ಎಂದು ಅವರಿಗೆ ಅನಿಸಬಹುದು. ಆಗಲೂ, ಬದಲಾವಣೆಗಳ ಸಹ್ಯ ಸಾಧ್ಯತೆಗಳನ್ನು ತೆರೆದಿಡುವ ಮೂಲಕ ಮಾರ್ಗದರ್ಶನ ಮಾಡುವುದು ಮುಖ್ಯ. ನಮ್ಮ ಹಿರಿಯರ ಬಾಲ್ಯವನ್ನು ಗಮನಿಸಿದರೆ, ಅವರು ಹತ್ತಾರು ದಾರಿಗಳನ್ನು ಗಮನಿಸಿಕೊಂಡು, ಆಯ್ಕೆ ಮಾಡಿಕೊಂಡು, ಅದನ್ನು ಕೈಬಿಟ್ಟು ಮತ್ತೆ ತಮ್ಮ ಆಸಕ್ತಿಗೆ ಹಿತವೆನಿಸುವ ದಾರಿಯನ್ನು ಆಯ್ಕೆ ಮಾಡಿಕೊಂಡವರೇ ಆಗಿದ್ದಾರೆ. ಆದರೆ ಈಗ ಮಾತ್ರ ನಾವು ಮಕ್ಕಳಿಗೆ, ಆಯ್ಕೆಗಳ ವಿಸ್ತಾರವನ್ನು ತೋರಿಸುವ ಬದಲಿಗೆ, ನಮ್ಮದೇ ಆಯ್ಕೆಗಳನ್ನು ಅವರ ಮೇಲೆ ಹೇರಿಬಿಡುತ್ತೇವೇನೋ ಅನಿಸುತ್ತದೆ.

ಇನ್ನೇನು, ಪರೀಕ್ಷೆಗಳು, ಆಯ್ಕೆಗಳ ಸಮಯ ಬಂದೇ ಬಿಟ್ಟಿತು ಅಲ್ಲವೇ. ಮಕ್ಕಳ ಜೊತೆಗೆ ನಿಲ್ಲುವುದು ಸದ್ಯದ ತುರ್ತು.

ಪ್ರತಿಕ್ರಿಯಿಸಿ: **feedback@sudha.co.in**